(ಖ) ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಸತತ ಮಳೆಯಿಂದ ರಸ್ತೆಗಳು ಶಿಥಿಲವಾಗಿರುವ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಮಹಾನಗರಸಭೆಯ ಒಡೆತನದ 550 ಕಿ.ಮಿ. ಉದ್ದಳತೆಯ ರಸ್ತೆಗಳಿದ್ದು. 2-3 ವರ್ಷಗಳ ಸತತ ಮಳೆಯಿಂದ ಹಾಗೂ ಇತರ ಕಾರಣಗಳಿಗಾಗಿ ನಗರದ ರಸ್ತೆಗಳು ಸಂಪೂರ್ಣ ಕೆಟ್ಟು ಹೋಗಿ ರಸ್ತೆಗಳಲ್ಲಿ ದೊಡ್ಡ ದೊಡ್ಡ ತಗ್ಗುಗಳು ಬಿದ್ದು ಸಂಚಾರಕ್ಕೆ ಬಹಳಷ್ಟು ಅನಾನುಕೂಲವಾಗಿರುತ್ತದೆ. ರಸ್ತೆಗಳ ಕಾಮಗಾರಿಯ ಹಿಂದಿನ ವರ್ಷದ ಬಿಲ್ ಅಂದಾಜು 97.00 ಲಕ್ಷದಷ್ಟು ಬಾರಿ ಇದ್ದು ಈಗ ರಸ್ತೆಗಳ ಸುಧಾರಣೆಗೆ ಕನಿಷ್ಟ 250 ಲಕ್ಷ ರೂಪಾಯಿಗಳ ಅವಶ್ಯಕತೆ ಇದ್ದು, ಮಹಾನಗರಸಭೆಯ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದ ಕಾರಣ, ರಸ್ತೆ ಸುಧಾರಣೆಗಾಗಿ ಸರ್ಕಾರ ಮೇಲೆ ಹೇಳಿದ 250 ಲಕ್ಷ ರೂಪಾಯಿಗಳ ವಿಶೇಷ ಅನುದಾನ ನೀಡುವುದು ಅತೀ ಅವಶ್ಯ ಇದ್ದು, ಈ ಕುರಿತು ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯ ಕಮೀಷನರ್ ರವರು ದಿನಾಂಕ 18.8.1995ರಂದು ಪತ್ರದ ಮುಖಾಂತರ ಸರ್ಕಾರದ ಗಮನಕ್ಕೆ ತಂದಿರುತ್ತಾರೆ. ಕಾರಣ ಈ ರಸ್ತೆಗಳ ಸುಧಾರಣೆಗಾಗಿ ರೂ. 250 ಲಕ್ಷವನ್ನು ವಿಶೇಷ ಅನುದಾನದ ರೂಪದಲ್ಲಿ ಬಿಡುಗಡೆ ಮಾಡಬೇಕಾಗಿ ನಾನು ವಿನಂತಿಸುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಹುಬ್ಬಳ್ಳಿ -ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ರಸ್ತೆಗಳು ಮಳೆ ಹಾಗೂ ಇತರ ಕಾರಣಗಳಿಂದ ಸಂಪೂರ್ಣ ಕೆಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ರಸ್ತೆಗಳ ರಿಪೇರಿಗಾಗಿ 1994-95ನೇ ಸಾಲಿನಲ್ಲಿ 60.00 ಲಕ್ಷ ರೂಪಾಯಿಗಳನ್ನು ಜಕಾತಿ ಅನುದಾನದಲ್ಲಿ ಕಡಿತ ಮಾಡಿ ನೀಡಲಾಗಿದೆ. ಅಲ್ಲದೆ ಹುಬ್ಬಳ್ಳಿ-ಧಾರವಾಡ ನಗರ ಪಾಲಿಕೆಯ ಆಯವ್ಯಯದಲ್ಲಿ 145.00 ಲಕ್ಷ ರೂಪಾಯಿಗಳ ವ್ಯವಸ್ಥೆ ಮಾಡಲಾಗಿತ್ತು. ಈ ಎಲ್ಲಾ ಹಣವನ್ನು ಈಗಾಗಲೇ ರಸ್ತೆ ದುರಸ್ತಿಗಾಗಿ ಉಪಯೋಗಿಸಲಾಗಿದೆ. ಇನ್ನೂ ಬಾಕಿ ಇರುವ ರಸ್ತೆಗಳ ದುರಸ್ತಿಗಾಗಿ 1995-96ನೇ ಸಾಲಿನ ನಗರ ಪಾಲಿಕೆ ಆಯವ್ಯಯದಲ್ಲಿ 160-00 ಲಕ್ಷ ರೂಪಾಯಿಗಳನ್ನು ಕಾಯ್ದಿರಿಸಲಾಗಿದೆ.

(ಎ) ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಿಗೆ ಸಾರಿಗೆ ವ್ಯವಸ್ಥೆ

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಸಗಿ ಬಸ್ಸುಗಳು ಗ್ರಾಮಾಂತರ ಪ್ರದೇಶ ಸಾರಿಗೆ ವ್ಯವಸ್ಥೆಯ ನೆಪದಲ್ಲಿ ಪರವಾನಿಗೆ ಪಡೆದಿದ್ದು, ಗ್ರಾಮಾಂತರ ಪ್ರದೇಶಗಳಿಗೆ ವ್ಯವಸ್ಥಿತವಾಗಿ ಹೋಗುತ್ತಾ ಇಲ್ಲವೆಂದು ಸಾರ್ವಜನಿಕರಿಂದ ಮನವಿಗಳು ಸರ್ಕಾರಕ್ಕೆ ಬಂದಿದೆ. ಆದರೂ ಇಲ್ಲಿಯ ತನಕ ಖಾಸಗಿ ಬಸ್ಸುಗಳು ಪರವಾನಿಗೆ ಪಡೆದ ಸ್ಥಳಗಳನ್ನು ತಲುಪುತ್ತಾ ಇಲ್ಲ. ಇದನ್ನು ತಕ್ಷಣ ಪರಿಶೀಲಿಸಿ ಹೋಗಬೇಕಾದ ಗ್ರಾಮಾಂತರ ಪ್ರದೇಶಗಳಿಗೆ ಹೋಗುವ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಈ ವಿಚಾರವನ್ನು ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಪರವಾಗಿ ಹಾಗೂ ಸಾರ್ವಜನಿಕರ ಪರವಾಗಿ ಸದನದ ಮೂಲಕ ಸರ್ಕಾರದ ಗಮನಕ್ಕೆ ತರುತ್ತಾ ಇದ್ದೇನೆ.

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು): ಮಾನ್ಯ ಉಪಾಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಪರವಾನಿಗೆ ಹೊಂದಿದ ಖಾಸಗೀ ಬಸ್ಸುಗಳು ಹೋಗುತ್ತಿಲ್ಲವೆಂಬ ಅನೇಕ ಮನವಿಗಳು ಹಾಗೂ ದೂರುಗಳು ಸಾರ್ವಜನಿಕರಿಂದ, ವಿದ್ಯಾರ್ಥಿ ಸಮುದಾಯದಿಂದ ಹಾಗೂ ಜಿಲ್ಲೆಯ ಮಾನ್ಯ ಶಾಸಕರುಗಳಿಂದ ಸರ್ಕಾರಕ್ಕೆ :ಜಿಲ್ಲಾ ಆಡಳಿತಕ್ಕೆ ಹಾಗೂ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಗಮನಕ್ಕೆ ಬಂದಿರುತ್ತದೆ. ಇಂತಹ ದೂರುಗಳು ಮುಂಗಾರು ಮಳೆಯ ಸಂದರ್ಭದಲ್ಲಿ ಹೆಚ್ಚು ಬಂದಿರುತ್ತವೆ. ಹೀಗೆ ಬಂದ ದೂರುಗಳ ಪೈಕಿ ಪ್ರಮುಖ ಗ್ರಾಮಾಂತರ ಪ್ರದೇಶಗಳಿಂದರೆ 1)